(12) 2

Regd No B G 155

48 th Year
ನೇ ವರ್ಷ
★
Sri 'Satyavadi
— DAILY —
MYSORE

ಸತ್ಯವಾದಿ

18—1—1965

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow
ಗೋಸಂರಕ್ಷಣೆ ಮಾಡಿ

ಸಾ॥ಪಕರು:- ಅಂಬ್ಲನೆ ಸಿಂಸ್ಕೆದಾರ್ ಎಂ ಏ ಸುಬ್ಬರಾಯುರು 2ನೈ]

ನಿಜಲಿಂಗಪ್ಪನವರಿಗೆ ನಿಧಿ ಅರ್ಪಣೆ

ದಾವಣಗೆರೆ— ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು 62 ನೇ ಹುಟ್ಟುಹಬ್ಬದಿನೋತ್ಸವನವು ಫೆಬ್ರವರಿಯಲ್ಲಿ ನಡೆಯುವಾಗ ಅವರಿಗೆ ರೂ 62000 ನಿಧಿ ಅರ್ಪಿಸಲು ಸ್ಥಳೀಯ ನರ್ತಕರು ನಿರ್ಧರಿಸಿದರು.

★

ಪೂರ್ಣ ವಿಫಲ

ಗುಲ್ಬರ್ಗ— ಗುಲ್ಬರ್ಗ ಜಿಲ್ಲೆಯ ಬೀದರು ಜಿಲ್ಲೆಗಳಲ್ಲಿ ಮಾರಿ ಬೆಳೆ ಪೂರ್ಣ ವಿಫಲವಾಗಿದೆಯೆಂದೂ, ದನಗಳ ಮೇವಿನ ಅಭಾವವಾಗಿದೆಯೆಂದೂ, ಪಾರ್ಲಿಮೆಂಟು ಸದಸ್ಯ ಶ್ರೀ ರಾಮಚಂದರ್ ವೀರಪ್ಪನವರು ಹೇಳಿದರು.

★

ಜಾತ್ರೆ ಇಲ್ಲ

ಚನ್ನಪಟ್ಟಣ— ಕನಕಾಪುರ ಗಾಳಿ ಮಂಗಳಲ್ಲಿ ಕಾಲರಾ ಹಾವಳಿ ಇರುವುದರಿಂದ ಗ್ರಾಮದೇವತೆ ಅಜ್ಜಿ ಹೊಂಡಿಸಲ್ಪಟ್ಟರುವುದಾಗಿ, ಇಂದಿನಿಂದ ನಡೆಯಬೇಕಾಗಿದ್ದ ಶ್ರೀ ಕೆಂಗಾಲು ಹನುಮಂತರಾಯ ಸ್ವಾಮಿ ಜಾತ್ರೆಯು ದನಗಳ ಸಂತೆ ನಿಲ್ಲಿಸಲ್ಪಟ್ಟಿದೆ.

—

ಮದ್ದೂರು— ಬೆಂಗಳೂರಿಗೆ ಹೋಗುತ್ತಿದ್ದ ಒಂದು ಪ್ರವಾಸಿಕಾ ಬಸ್ಸು ಬೊಡ್ಡನಹಳಿನಪರೆ ಹತ್ತಿರ ಒಂದು ಸೇತುವೆಗೆ ಬಡಿದು ಗೋಡೆಯ ಮೇಲೆ ಕುಳಿತಿದ್ದ ಹುಡುಗನು ಸಕ್ಕೆಳಗೆ ಬಿದ್ದನು.

ಶಾಲೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನ ಮಹಾವಿದ್ವಾನ್, ಧರ್ಮಾಧಿಕಾರಿ
ಕಾಲಜ್ಞಾನಾಚಾರ್ಯಪಕ್ಕ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜ್ಯೋಯಿಸರವರಿಂದ
19 ಮಂಗಳವಾರ ಬದಿಗೆ ಅಶ್ಲೇಷ

ಕುಸಿದು ಸಾವು

ವೆನಿಸ್— ಹೋಟಲು ಟೆಲಿವಿಷನ್ನಿಂದ ಸರ್ ವಿನಸ್ಟನ್ ಚರ್ಚಿಲ್ಲರ ಆಸ್ವಸ್ಥತೆಯನ್ನು ಮೊನ್ನೆ ತಿಳಿದು 65 ವರ್ಷದ ಲಂಡನ್ನಿಗನೊಬ್ಬನು ಕುಸಿದು ಸತ್ತನು.

★

ದರ ನಿಗದಿ

ಬೆಂಗಳೂರು— ಮೈಸೂರು ನೀರಾವರಿ ಮಂಡಲಿ ಶಾಸನವಾದನಂತರ ರಾಜ್ಯದ ಸರ್ವ ನೀರಾವರಿ ಕೆಲಸಗಳಿಗೂ ಸಂಬಂಧಿಸಬೇಕೆಂದು ಜಂಟಿ ಸೆಲೆಕ್ಟ್ ಸಮಿತಿ ಸೂಚಿಸಿದೆ ಮಸೂದೆಯಲ್ಲಿ ಮೊಂಟಿನೆನ್ನು ಸೆಸ್ಸ್ ಎಕ್ರೆಗೆ ರೂ 5 ರಂತೆ ಸೂಚಿಸಿರುವುದನ್ನು 4 ಕ್ಕೆ ಮಿತಿ ಮಾಡುವಂತೆ ಸೂಚಿಸಿದೆ

★

ದಂಡನೆ

ಕಂಟ್ರೋಲು ಬೆಲೆ ಕ್ವಿಂಟಾಲಿಗೆ 79 ರೂಪಾಯಿಗಳಿಂದ ಬಂಗಾರು ಸಣ್ಣ ಅಕ್ಕಿಯನ್ನು 110 ಕ್ಕೆ ಮಾರಿದ ಅಬ್ದುಲ್ ಹುಸೂನ ಮೇಲೆ ಮೊಕದ್ದಮೆ ರಿಜಿಸ್ಟರು ಮಾಡಿಕೊಳ್ಳಲಾಗಿದೆಯೆಂದು ಬೆಂಗಳೂರು ವಾರ್ತೆ

ವಿಶೇಷ ಪೂಜೆ

ಬ್ರಿಟಿಷ್ ಮಾಜಿ ಪ್ರಧಾನಿ ಚರ್ಚಿಲ್ಲರ ಶ್ರೇಯಸ್ಸಿಗೆ ಎಲ್ಲ ಚರ್ಚುಗಳಲ್ಲೂ ವಿಶೇಷ ಪ್ರಾರ್ಥನೆ ನಡೆಯಿತು

ಮೆಹತಾ ಹೇಳಿಕೆ

ದೇಶದ ಜನಸಂಖ್ಯೆ ಹತೋಟಿಗೆ ಬರದಿದ್ದರೆ ದಾರಿದ್ರ್ಯ ನಿವಾರಣೆ ಆಗುವದು ಕಷ್ಟವೆಂದು ಶ್ರೀ ಅಶೋಕ ಮೆಹತ ನುಡಿದರು

ಸಾದಾ ಸಜ

ಸರ್ಕಾರವು ಬೆಳಗಾಂ ಮುನ್ಸಿಪಾಲಿಟಿಗೆ ಒಬ್ಬ ಆಡಳಿತಗಾರನನ್ನು ನೇಮಿಸಿ ಅವರು ಡಿಸೆಂಬರು 22 ರಂದು ಅಧಿಕಾರಕ್ಕೆ ಬಂದಾಗ ಪ್ರತಿಭಟನೆ ಪ್ರದರ್ಶನ ಮಾಡಿದಕ್ಕಾಗಿ ಅ ಸೈಕಿ ಇಬ್ಬರು ಮಾಜಿ ಸಭಾ ಸದಸ್ಯರು ಮೇರೆ ಕಲಾ ರೂ 2ದಂಡ ತಪ್ಪಿದರೆ 2 ದಿನ ಸಾದಾ ಸಜೆ ವಿಧಿಸಿ ಎಲ್ಲರೂ ಜೈಲಿಗೆ ಹೋಗಲೊಪ್ಪಿ ಜಾಮೀನ್ ಕೊಡಲು ನಿರಾಕರಿಸಿದರು

★

ನಿಷ್ಠೆಯಿರಬೇಕು

ಹೈದರಾಬಾದು— ನೂತನ ಮುಖ್ಯಮಂತ್ರಿ ಭಾರತಕ್ಕೆ ಪೂರ್ಣ ನಿಷ್ಠೆಯುಳ್ಳವರಾಗಿರಬೇಕೆಂದು ಭಾರತ ವಿದ್ಯಾಮಂತ್ರಿ ಶ್ರೀ ಚಾಗ್ಲಾರವರು ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಮಾಡಿದ ವದವೀದಾನ ಸಮಾರಂಭ ಭಾಷಣದಲ್ಲಿ ತಿಳಿಸಿದರು.

❋

ತೆರಿಗೆ

ಬೆಂಗಳೂರು— ಈಗಿನ ಪಂಚವಾರ್ಷಿಕ ಯೋಜನೆಯು ಕಡೇ ವರ್ಷವಾದ ಮುಂದಿನ ಆರ್ಥಿಕ ವರ್ಷದಲ್ಲಿ ಸುಂಕಾದಾಯವು 3-5 ಕೋಟಿ ರೂಗಳನ್ನು ಹೆಚ್ಚಿಗೆ ತೆರಿಗೆಗಳಿಂದ ಎತ್ತಬೇಕಾಗಿದೆ ಎಂದು ಹಣಕಾಸಿನ ಮಂತ್ರಿ ಶ್ರೀ ಜೆತ್ತಿಯವರು ಶಾಸನ ಸಭೆಯಲ್ಲಿ ಶನಿವಾರ ತಿಳಿಸಿದರು.

★

ಸೇನೆ ಜಮಾವಣೆ

ಉತ್ತಮ ಗಡಿಗಳು ಹಾಗೂ ಸಿಕ್ಕಿಂನ ಈಗಿನ ಪರಿಸ್ಥಿತಿಗೆ ಬೆದರಿಕೆ ಆಗುವಂತೆ ಚುಂಬಿ ಕಣಿವೆಯಲ್ಲಿ ಚೀನಾ ಸೇನೆಯ ಹೊಸ ಜಮಾವಣೆ ಮಾಡಿರುವದಾಗಿ ಕಲ್ಕತ್ತಾಕ್ಕೆ ವಂದಿ ಬಂದಿದೆ

ಸರಿಯಲ್ಲ

ಹಿಂದಿ ಸಾಮ್ರಾಜ್ಯಶಾಹಿ ಮುಖ ಹಿಂದಿ ಒತ್ತಾಯ ಎಂದು ಹೇಳುವದು ಸರಿಯಲ್ಲವೆಂದು ಪ್ರಧಾನಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರು ಸಂಸತ್ತಿನಲ್ಲಿ ತಿಳಿಸಿದರು.

★

ಕೇರಳ ಎಲೆಕ್ಷನ್

ಕಾಂಗ್ರೆಸು ಕೇರಳ ಚುನಾವಣೆಯಲ್ಲಿ ಗೆಲ್ಲುವ ಅವಕಾಶ ದಿನೇ ದಿನೇ ಹೆಚ್ಚುತ್ತಿದೆ ಎಂದು ಕಾಂಗ್ರೆಸು ಅಧ್ಯಕ್ಷ ಶ್ರೀ ಕಾಮರಾಜರವರು ಮದ್ರಾಸಿನಲ್ಲಿ ತಿಳಿಸಿದರು.

—

ಭೂಮಿಯೊಳಗೆ ಶಬ್ದ

ಗುಡಿಬಂಡೆ— ಕೊಳ್ಳಿಪಲ್ಲಿ, ವೆಂಕಟ್ಯಕೆರೆ ಮತ್ತು ಅಗತವಾಡ ಗ್ರಾಮಗಳಲ್ಲಿ ಭೂಮಿಯೊಳಗೆ ಗುಡುಗುಡು ಶಬ್ದವಾಗುತ್ತಿದ್ದು ಶನಿವಾರ ಭೂಗರ್ಭ ಶಾಸ್ತ್ರಜ್ಞರು ಬಂದಿರುವರು.

★

ಪ್ರಧಾನಿಗಳ ಭಾವಚಿತ್ರ

ನವದೆಹಲಿ— ಭಾರತ ಗೃಹಸಚಿವಾಲಯವು ಒಂದು ಸರ್ಕಾರಿ ಮೂಲಕ ಪ್ರಧಾನಿ ಶಾಸ್ತ್ರಿಗಳವರ ಮೂಲಕ ಪ್ರಧಾನಿ ಶಾಸ್ತ್ರಿಗಳವರ ಭಾವಚಿತ್ರವನ್ನು ಕೂಡಲೇ ಎಲ್ಲ ಸರಕಾರಿ ಆಫೀಸುಗಳಲ್ಲಿಯೂ, ಸಂಸ್ಥೆಗಳಲ್ಲಿಯೂ ಪ್ರದರ್ಶಿಸಬೇಕೆಂದು ತಿಳಿಸಿದೆ.

—

ಹದಿನೇಳು ವರ್ಷದ ಸ್ವಾತಂತ್ರ್ಯನಂತರವೂ ಆಹಾರ ಪರಿಪೂರ್ಣತೆ ಹೊಂದದಿರುವದಕ್ಕೆ ಸರ್ಕಾರ ವಿಫಲವಾಗಿದೆ, ಜೂನಿನಲ್ಲಿ ಆಹಾರ ಬೆಳೆ ಬರುವುದೆಂದು ಪಾರ್ಲಿಮೆಂಟು ಸದಸ್ಯ ಶ್ರೀ ಶಿವಮೂರ್ತಿ ಸ್ವಾಮಿ ಗುಲ್ಬರ್ಗದಲ್ಲಿ ನುಡಿದರು

ನ್ಯಾಯ ಪದ್ಧತಿಯಲ್ಲಿ ತಡ

ಕಳೆದ ಬಂಗಾಳದಲ್ಲಿ ಈಚೆಗೆ ನಡೆದ ಲಾಯರ್ಸ ಸಮ್ಮೇಳನದಲ್ಲಿ ಲಾಯರ್ಸುಗಳ ಜವಾಬ್ದಾರಿ ವಿಷಯದಲ್ಲಿ ಸಮಾಲೋಚಿಸುತ್ತಾ, ಅಧ್ಯಕ್ಷ ಶ್ರೀ ಬಿ ಕೆ ದತ್ತಾಯರು ಹೀಗೆ ಹೇಳಿದರು — ' ವಿಚಾರಣೆಗೆ ಇದಿರ್ಪಟ್ಟ ಮೊಕದ್ದಮೆಗಳಲ್ಲಿ, ಒಂದಲ್ಲ ಒಂದು ಸಬೂಬು ಹಾಕಿ ಅಡ್ಜರ್ನಮೆಂಟು ಮೇಲೆ ಅಡ್ಜರ್ನಮೆಂಟುಗಳನ್ನು ನ್ಯಾಯಯೋಚನಾರ್ಥ ಪಡೆಯುವುದಿಲ್ಲವೇ? ಕಕ್ಷಿಗಾರರನ್ನು ಮೊಕದ್ದಮೆ ಹೂಡಲು, ಮತ್ತು ಮೊಕದ್ದಮೆಗಳ ಪುನರ್ವಿಚಾರಕ್ಕೆ ಅಥವಾ ಅಪೀಲಿಗೆ ಹೋಗಲು ಸಲಹೆ ನೀಡುವಾಗ ನಾವು ಯಾವಾಗಲೂ ನಮ್ಮ ಉದ್ಯೋಗದ ನೈತಿಕಕ್ಕೆ ಬಗ್ಗೆ ಪ್ರಾಮಾಣೀಕವಾಗಿಯೂ ನೈಜವಾಗಿಯೂ ವರ್ತಿಸುತ್ತೇವೆಯೇ ' ಎಂದಿರುವರು

ಹಶುವನ್ನು ಅಡಗಿಸುವ ವಿಚಿತ್ರ ಮೂಲಿಕೆ

ಅಹಮದಾಬಾದಿನಿಂದ ಕೆಲವು ದಿವಸಗಳ ಹಿಂದೆ ಖಂದ ಯು ಎ ಐ ವರದಿಯಿದು.

ಗುಜರಾತಿನ ಅರಣ್ಯಗಳಲ್ಲಿ ಬೆಳೆಯುವ ಕಾಳಿಯಾ ಮೂಲಿಕೆ ಜಿಜ್ಞಾಸಕ್ಕೆ ಅವಕಾಶ ಕೊಟ್ಟಿದೆ ; ಇದು ಹಶವನ್ನು ನೀಗಿಸುವುದೆಂದೂ, ಕಡೇಪಕ್ಷ ಹಶುವನ್ನು ನಾಲ್ಕು ದಿನಗಳು ಕಡೆಯುವುದೆಂದೂ ಹೇಳಲಾಗಿದ್ದು, ಸಂಶೋಧನೆಸಾಗಿ ದೆಹಲಿಯ ಸೆಂಟ್ರಲ್ ರಿಸರ್ಚ್ ಲ್ಯಾಬೊರೇಡರಿಗೆ ಕಳುಹಿಸಲಾಗಿದೆ.

ಗುಜರಾತಿನ ಶುದ್ಧ ಆಯುರ್ವೇದ ಸಂಘದ ಅಧ್ಯಕ್ಷ ಶ್ರೀ ರಸಿಕಲಾಲ ವೈದ್ಯರ ನೇತೃತ್ವದಲ್ಲಿ ಕಾಡುಗಳನ್ನು ಸರ್ವೇ ಮಾಡಿದಾಗ ಸಿಕ್ಕಿದ ಈ ಮೂಲಿಕೆಯ ಕೆಲವು ಮಾದರಿಗಳನ್ನು ಸೆಂಟ್ರಲ್ ರಿಸರ್ಚ್ ಲ್ಯಾಬರೇಟರಿಗೆ ಕಳುಹಿಸಲಾಗಿದೆ ಎಂದು ವೈದ್ಯರು ಪತ್ರಿಕೆಯವರಿಗೆ ತಿಳಿಸಿದರು.

ಹಶುವನ್ನು ಅಡಗಿಸುವ ಇದರ ಶಕ್ತಿ ಬಗ್ಗೆ ಅವೇಕರು ಸಂಶಯಗೊಂಡು ಜಿಜ್ಞಾಸಕ್ಕೆ ಅವಕಾಶವಾಗಿದೆ

§ ಸರಕಾರವು ಎಲ್ಲ ಪ್ರಾಯೋಗಿಕೆಗಳನ್ನು ಗುಣಪಡಿಸಬಲ್ಲ ಆಯುರ್ವೇದ ಮೂಲಿಕೆಗಳ ಬಗ್ಗೆ ಆಸಕ್ತಿ ವಹಿಸುತ್ತಿರುವುದನ್ನು ಕಂಡು ನಮಗೆ ಸಂತೋಷವಾಗುತ್ತದೆ (Truth)

SHAKTI SUDHA

Superb Tonic

Help The ' Gorakshana '

" ಗೋರಕ್ಷಣಾ " ಕ್ಕೆ ಬೆಂಬಲಿಗರಾಗಿರಿ

ಆಕ್ಷತಕಾಮಿನಿ, ಗೋರಕ್ಷಣೆ, ಪಶುಚಿಕಿತ್ಸೆ, ಕಾಳಸಂಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಿಕ ಪತ್ರಿಕೆ.

R8 PR 336
1964–65

Mysore City Municipal Council
Mysore Date 9–12–64

ಹರಾಜು ಇಸ್ತಿಹಾರ್

ಮೈಸೂರು ಸಿಟಿ ಮುನಿಸಿಪಲ್ ಕಮಿಷನರ್‌ರವರ ಆಫೀಸಿನಿಂದ

ಇಸ್ತಿಹಾರ್‌ನಾಮೆ ನಂ PR 336/64–65 ತಾರೀಖು 9–12–64

ಮೈಸೂರು ಸಿಟಿ ಮುನಿಸಿಪಾಲಿಟಿಗೆ ಸೇರಿದ ವಿವಿಲೇಜಿನಿಯಸ್ ಆಫೀಸಿಯಲ್ ವಗೈರೆ ಕಿವಿನ್ಯೂ ಬಾಬುಗಳನ್ನು 1965 ನೇ ಇಸವಿ ಏಪ್ರಿಲ್ 1 ನೇ ತಾರೀಖು ಲಾಗಾಯ್ತು 1966 ನೇ ಮಾರ್ಚ್ ಪೂರ್ತಿ ಒಂದು ವರುಷ ಕಾಲ ಬಹಿರಂಗವಾಗಿ ಹರಾಜು ಮಾಡಿ ಕೊಡುವ ಹಕ್ಕನ್ನು 1965 ನೇ ಜನವರಿ 21 ನೇ ತಾರೀಖು ಲಾಗಾಯ್ತು ಈ ಆಫೀಸಿನಲ್ಲಿ ಅಲಾಯಿದ ಸಾದರ ಮಾಡಿರುವ ಇಸ್ತಿಹಾರ್‌ನಾಮೆಯಲ್ಲಿ ವಿವರಿಸಿರುವಂತೆ ಆಯಾಯ ಬಾಬುಗಳನ್ನು ಆಯಾಯ ಸ್ಥಳಗಳಲ್ಲಿ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತೆ.

ಸದರಿ ಬಾಬುಗಳನ್ನು ಪಡೆಯಲು ಇಚ್ಛೆವುಳ್ಳವರು ಹರಾಜು-ನಿಬಂಧನೆಗಳಿಗೆ ಒಳಪಟ್ಟು ಆಯಾಯ ಬಾಬುಗಳನ್ನು ಹರಾಜು ಕಾಲಕ್ಕೆ ಹಾಜರಾಗಿ ಛಡ ಪವಾಲು ಮೂಲಕ ಪಡೆಯಬಹುದು. ಹೆಚ್ಚಿಗೆ ವಿವರಗಳನ್ನು ಆಫೀಸು ನೆಡೆಯುವ ದಿನಗಳಲ್ಲಿ ಕೆವಿನ್ಯೂ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(Sd) J. T. Viswanathan
Commissioner, C. M. C. Mysore

ವುಡ್‌ಲಾಂಡ್ಸ್ ವೈಭವ 6 ನೇ ವಾರ

ಏಪ್ರಿಲ್ ಫೂಲ್ (ಹಿಂದಿ) **April Fool**

ಸೈರಾಬಾನು, ದಿಶ್ವಜೀತ್ ಅಭಿನಯಿಸಿರುವ, ಸ್ವಾರಸ್ಯ ಪ್ರಸಂಗಗಳು, ನಕ್ಕು ನಲಿಸುವ ಹಾಸ್ಯ ವಿನೋದ, ನೃತ್ಯ ಸಂಗೀತದಿಂದ ಕೂಡಿದ ಮನೋಲ್ಲಾಸಿಕ ಕಲಾಕೃತಿ.
– ಸುಬೋಧ ಮುಖರ್ಜಿಯವರ ಅಮೋಘ ಈಸ್ಟ್‌ಮೆನ್ ಕಲರ್ ಚಿತ್ರ –

ಸಂತೋಷ : ಶಂಕರ್ ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— 15–1–65 ರಿಂದ

ಬೊಬ್ಬಿಲಿ ಯುದ್ಧಮು [ತೆಲುಗು]

ಪಾತ್ರ— ಎನ್ ಟಿ ರಾಮರಾವ್, ಭಾನುಮತಿ, ಎಂ ಆರ್ ರಾಧಾ, ಜಮುನಾ ವಿಜಯಲಕ್ಷ್ಮಿ, ರಾಜನಾಲಾ, ಎಸ್ ವಿ ರಂಗರಾವ್ [ದಿನ 3 ಆಟಗಳು]

ಆಶೋಕಾ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4